ಇದಕ್ಕೆ ಸೂಕ್ತ ಉತ್ತರವಾಗಿದೆ. ಚಿಂತನಾಶಕ್ತಿ, ಕರ್ತೃತ್ವಶಕ್ತಿ ಹಾಗೂ ತಾಂತ್ರಿಕ ಕೌಶಲ, ಇವುಗಳನ್ನು ನಿಸರ್ಗದತ್ತವಾಗಿ ಹೊಂದಿರುವ ಮಾನವ ಈ ಕಾರಣದಿಂದಾಗಿ ಭೂಮಿಯ ಮೇಲಿನ ಇತರೆಲ್ಲ ಜೀವಿಗಳಿಗಿಂತ ವಿಭಿನ್ನವಾಗಿದ್ದಾನೆ. ಮೊದಲಿಗೆ ತನ್ನ ಸುತ್ತಲಿನ ಜಗತ್ತನ್ನು, ನಂತರ ಇಂದು ಇಡೀ ಬ್ರಹ್ಮಾಂಡವನ್ನು (ಯೂನಿವರ್ಸ್) ಕೂಲಂಕಷವಾಗಿ ಅರ್ಥಮಾಡಿಕೊಳ್ಳುವ ತುಡಿತವಿರುವ ಮಾನವ ದಿನಕಳೆದಂತೆ ಹೊಸ ಸ್ಥಳಗಳ, ಹೊಸ ಲೋಕಗಳ ಪರಿಚಯ ಮಾಡಿಕೊಂಡಿದ್ದಾನೆ.

ಜೊತೆಗೇ ಆ ಸಂಬಂಧದಲ್ಲಿ ದೊರೆತ ಜ್ಞಾನವನ್ನು ತನ್ನ ಔನ್ನತ್ಯಕ್ಕಾಗಿಯೂ ಬಳಸಿಕೊಂಡಿದ್ದಾನೆ. ಇಂದಿಗೂ ಆ ತುಡಿತ ಅವಿರತವಾಗಿ ಮುಂದುವರೆಯುತ್ತಲೇ ಇದೆ. ಅಂತರಿಕ್ಷಯಾನಕ್ಕೆ ಸಂಬಂಧಿಸಿದ ಇಂದಿನ ಅದ್ಭುತವಾದ ಚಟುವಟಿಕೆಗಳು ಇದಕ್ಕೆ ಒಂದು ಉತ್ತಮವಾದ ಉದಾಹರಣೆಯಾಗಿವೆ.


ಎವರೆಸ್ಟ್ ಅನ್ನು ಏರಿದ ಸಾಹಸಿಗರಲ್ಲಿ ಮೊದಲಿಗರಾದ ಸರ್ ಎಡ್ಮಂಡ್ ಹಿಲರಿಯವರ ಒಂದು ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಅವರನ್ನು ಒಬ್ಬ ಮಾಧ್ಯಮದ ಪ್ರತಿನಿಧಿ – 'ನೀವು ಎವರೆಸ್ಟ್ ಅನ್ನು ಏರುವ ಸಾಹಸ ಕೈಗೊಂಡಿದ್ದೇಕೆ' ಎಂದು ಕೇಳಿದಾಗ ಅವರು, 'ಅದು ಇದೆಯಲ್ಲವೇ, ಆ ಕಾರಣದಿಂದ' ಎಂದು ಉತ್ತರಿಸಿದರಂತೆ. ಹೀಗೆ ಹೊಸ ಜಾಗಗಳ ಅನ್ವೇಷಣೆ ಮಾನವನಿಗೆ ರಕ್ತಗತವಾಗಿ ಬಂದಿದೆ.

ಅದೇ ರೀತಿ ಮಾನವನ ತೀರದ ಅನ್ವೇಷಣಾ ದಾಹವನ್ನು ಅರಿತಾಗ 'ನಾರದ ವಿಜಯ' ಚಲನಚಿತ್ರದ 'ಎಂಥಾ ಲೋಕವಯ್ಯಾ (ಅಂದರೆ ಮಾನವರಿರುವ ಭೂಲೋಕ), ಇದು ಎಂಥಾ ಲೋಕವಯ್ಯಾ, ಹೊಸತನವ ಕೊಡುವ, ಹೊಸವಿಷಯ ಅರಿವ, ಬಯಕೆ ತರುವ ಇದು ಎಂಥಾ ಲೋಕವಯ್ಯಾ' ಎಂಬ ಗೀತೆ ನೆನಪಿಗೆ ಬರುತ್ತದೆ.

ಮತ್ತೆ ಮೆಗಲಾನನ ವಿಷಯಕ್ಕೆ ಬರೋಣ. 'ಪ್ರಪಂಚ ಪ್ರದಕ್ಷಿಣೆ'ಯಲ್ಲಿ ಪರ್ಯಾವಸಾನವಾದ ಸಾಹಸಯಾನವನ್ನು ಮೆಗಲಾನ್ ಕೈಗೊಳ್ಳುವ ಹೊತ್ತಿಗಾಗಲೇ ಕೊಲಂಬಸ್ ಅಮೆರಿಕ ಖಂಡವನ್ನು ಕಂಡುಹಿಡಿದಿದ್ದ (ಕ್ರಿ.ಶ. 1492). ಅದೇ ರೀತಿ ವಾಸ್ಕೋ ಡ ಗಾಮಾ ಪೋರ್ಚುಗಲ್‌ನಿಂದ ಹೊರಟು ಆಫ್ರಿಕಾದ ದಕ್ಷಿಣ ತುದಿಯ ಮಾರ್ಗವಾಗಿ ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡುಹಿಡಿದಿದ್ದ (ಕ್ರಿ.ಶ. 1498).

## ಯಾನದ ಹಿನ್ನೆಲೆ

ಪೋರ್ಚುಗಲ್‌ನ ಶ್ರೀಮಂತವರ್ಗಕ್ಕೆ ಸೇರಿದ ಕುಟುಂಬದಲ್ಲಿ ಜನಿಸಿದ ಮೆಗಲಾನ್, ಹಿಂದೂ ಮಹಾ ಸಾಗರದಲ್ಲಿ ವಿಹರಿಸುತ್ತಿದ್ದ ಆ ದೇಶದ ನೌಕಾಪಡೆಯ ಹಡಗುಗಳಲ್ಲಿ ಸೇವೆಸಲ್ಲಿಸಿ ಕಣ್ಣಾನೂರಿನ ಕದನವೂ ಸೇರಿದಂತೆ ಅನೇಕ ಬಾರಿ ತನ್ನ ಶೌರ್ಯವನ್ನು, ನಾಯಕತ್ವ ಸಾಮರ್ಥ್ಯವನ್ನು ಪ್ರದರ್ಶಿಸಿದ್ದ. ಕೊಲಂಬಸ್ ಹಾಗೂ ಡ ಗಾಮಾ




ಮೆಗಲಾನ್‌ನ ವಿಕ್ಟೋರಿಯಾ ಹಡಗು, ಕಲಾವಿದನ ಕಲ್ಪನೆಯಲ್ಲಿ

ಅವರ ಯಾನದಿಂದ ಸ್ಫೂರ್ತಿ ಪಡೆದ ಆತ, ಸಾಂಬಾರ ಪದಾರ್ಥಗಳ ದ್ವೀಪಗಳಿಗೆ ಪಶ್ಚಿಮ ದಿಕ್ಕಿನಿಂದ ಸಾಗುವ ಹೊಸ ಮಾರ್ಗವನ್ನು ಕಂಡುಹಿಡಿಯುವ ಯಾನಕ್ಕೆ ಸಹಾಯ ನೀಡಲು ಪೋರ್ಚುಗಲ್‌ನ ದೊರೆಯನ್ನು ವಿನಂತಿಸಿಕೊಂಡ. ಆ ವೇಳೆಗಾಗಲೇ ಮೆಗಲಾನನ ಬಗ್ಗೆ ಅಸಮಾಧಾನಗೊಂಡಿದ್ದ ಅರಸನಿಂದ ಅದಕ್ಕೆ ಸಮ್ಮತಿ ದೊರೆಯದೆ ಹೋದಾಗ, ಮೆಗಲಾನ್ ಸ್ಪೇನ್‌ನ ದೊರೆ ಒಂದನೇ ಚಾರ್ಲ್ಸ್‌ಗೆ ಕೋರಿಕೆ ಸಲ್ಲಿಸಿದ. ಅದಕ್ಕೆ ಅನುಮತಿಯೂ ಕೆಲಕಾಲದ ನಂತರ ದೊರೆಯಿತು.

## ಅದಕ್ಕೆ ಕಾರಣವೇನು ಗೊತ್ತೇ?

15ನೇ ಶತಮಾನದಲ್ಲಿ ಸ್ಪೇನ್ ಹಾಗೂ ಪೋರ್ಚುಗಲ್ ದೇಶಗಳು ಸಮುದ್ರಯಾನ, ಸಮುದ್ರದಲ್ಲಿ ಸಾಗುವ ಮೂಲಕ ಮಾಡುವ ವ್ಯಾಪಾರದಲ್ಲಿ ಅತ್ಯಂತ ಪ್ರಭಾವಿ ಶಕ್ತರಾಷ್ಟ್ರಗಳಾಗಿ ಹೊರಹೊಮ್ಮಿ ದೊಡ್ಡ ನೌಕಾಪಡೆಗಳನ್ನು ಹೊಂದಿದ್ದವು. ಜೊತೆಗೇ ಅವು ಒಂದಕ್ಕೊಂದು ಪ್ರತಿಸ್ಪರ್ಧಿಯೂ ಆಗಿದ್ದವು. ಕ್ರಿ.ಶ. 1494ರಲ್ಲಿ ಬರಲಾದ 'ಟೊರ್ಡಿಸಿಯಾಸ್ ಒಪ್ಪಂದ'ದ ಪ್ರಕಾರ, ಪೋಪ್ ಆರನೇ ಅಲೆಕ್ಸಾಂಡರ್ ಈ ಎರಡೂ ರಾಷ್ಟ್ರಗಳ ನಡುವೆ ಮಧ್ಯಸ್ಥಿಕೆ ವಹಿಸಿದ; ಸುಮಾರಾಗಿ 46 ಡಿಗ್ರಿ ರೇಖಾಂಶದ (ಲಾಂಜಿಟ್ಯೂಡ್) ಪಶ್ಚಿಮದ ಪ್ರದೇಶಗಳನ್ನು ಸ್ಪೇನ್‌ನ ಪ್ರಭಾವಿ ವಲಯದಲ್ಲಿ ಬರುವಂತೆ ಮತ್ತು ಆ ರೇಖಾಂಶದ ಪೂರ್ವ ಪ್ರದೇಶಗಳು ಪೋರ್ಚುಗಲ್‌ನ ಪ್ರಭಾವಿ ವಲಯದಲ್ಲಿ ಬರುವಂತೆ ಜಗತ್ತನ್ನು ವಿಭಾಗಿಸಿದ!

ಹೀಗೆ ಸಾಂಬಾರ ಪದಾರ್ಥಗಳ ದ್ವೀಪವನ್ನು ತಲುಪಲು ಪೋರ್ಚುಗಲ್ಲಿನ ಅಧೀನದಲ್ಲಿದ್ದ ಪೂರ್ವದ ಸಮುದ್ರಮಾರ್ಗವನ್ನು ತಪ್ಪಿಸಿ ಸ್ಪೇನ್‌ಗೆ ಸೇರಿದ ಪಶ್ಚಿಮದ ಕಡೆಯಿಂದ ಏಷ್ಯಾದ ಆ ದ್ವೀಪಗಳನ್ನು ತಲುಪಲು ಮೆಗಲಾನ್ ಸರ್ವಸಿದ್ಧತೆಗಳನ್ನೂ ಆ ದೇಶದ ದೊರೆಯ ಕೃಪೆಯಿಂದಾಗಿ ಮಾಡಿಕೊಂಡ. ಆದರೆ ಈ ಪೋರ್ಚುಗೀಸ್ ಬೃಹಸ್ಪತಿ, ನಾವಿಕ–ನಾಯಕನ ಬಗ್ಗೆ ಅವನ ತಂಡದಲ್ಲಿದ್ದ ಸ್ಪೇನ್‌ನ ನಾವಿಕರಿಗೆ ಭಾರೀ ಅಸಹನೆಯಿತ್ತು.

## ಯಾನದ ಆರಂಭ

ಅಂತಿಮವಾಗಿ ಕ್ರಿ.ಶ. 1519ರ ಆಗಸ್ಟ್ 10ರಂದು ಟ್ರಿನಿಡಾಡ್, ವಿಕ್ಟೋರಿಯಾ, ಸ್ಯಾನ್ ಆಂಟೋನಿಯೊ, ಕೊನ್ಸೆಪ್ಸಿಯಾನ್ ಹಾಗೂ ಸ್ಯಾಂಟಿಯಾಗೊ ಎಂಬ ಹೆಸರಿನ ಐದು ಹಡಗುಗಳು ಮೆಗಲಾನನ ನೇತೃತ್ವದಲ್ಲಿ ಸೆವಿಲ್‌ನಿಂದ ಹೊರಟವು. ಆ ಪೈಕಿ ಸ್ಯಾನ್ ಆಂಟೋನಿಯೊ 'ಕ್ಯಾರಾವಲ್' ಎಂಬ ಹಡಗಾಗಿದ್ದರೆ, ಉಳಿದ ನಾಲ್ಕು 'ಕ್ಯಾರಾಕ್'ಗಳಾಗಿದ್ದವು. ದೊಡ್ಡದಾದ ಸ್ಯಾನ್ ಆಂಟೋನಿಯೊ ಸುಮಾರು ನೂರು ಅಡಿ

